**OS No. 78/2019**
**PW.2**

**ಸಾಕ್ಷಿಗೆ ದಿನಾಂಕ 10.12.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ನಾನು ಎಸ್.ಎಸ್.ಎಲ್.ಸಿ. ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಾಕ್ಷಿ ನುಡಿಯಲು ವಾದಿಯೇ ಕರೆದುಕೊಂಡು ಬಂದಿರುತ್ತಾರೆ. ವಾದಿಯು ನನ್ನ ಚಿಕ್ಕಮ್ಮ. ವಾದಿಯು ದಾರಿಯನ್ನು ಬಿಡಲು ಕೋರಿ ದಾವೆ ಹೂಡಿರುತ್ತಾರೆ. ವಾದಿಗಳ ದಾವಾ ಆಸ್ತಿಯ ಚೆಕ್ಕುಬಂಧಿ ಪೂರ್ವಕ್ಕೆ ಗಂಗಪ್ಪರವರ ಜಮೀನು (ಪ್ರತಿವಾದಿಗಳ ಸ್ವತ್ತು), ಪಶ್ಚಿಮಕ್ಕೆ ಹಳ್ಳ ಮತ್ತು ಅದರ ಪಕ್ಕಕ್ಕೆ ಚಿಕ್ಕಗುಟ್ಟಪ್ಪ ಮತ್ತು ನರಸಿಂಹಪ್ಪರವರ ಜಮೀನು, ದಕ್ಷಿಣಕ್ಕೆ ಮರಿಯಪ್ಪ, ನರಸಿಯಪ್ಪ, ಉತ್ತರಕ್ಕೆ ಅಗಸನ ಗಂಗಪ್ಪ. ಪ್ರತಿವಾದಿಗಳ ತಕರಾರು ಏನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳಿಗೆ ಸರ್ವೇ ನಂ. 292 ಕುಟುಂಬದಲ್ಲಿ ಹಂಚಿಕೆಯಾದಾಗ ಬಂದಿರುತ್ತದೆ, ಪ್ರತಿವಾದಿಗಳು ಸಹ ನಮ್ಮ ಕುಟುಬಂದವರೇ ಎಂದು ನುಡಿಯುತ್ತಾರೆ. 1 ರಿಂದ 5 ನೇ ಪ್ರತಿವಾದಿಗಳು ಓ.ಎಸ್. 260/2017 ರಂತೆ ದಾವೆಯನ್ನು ಹೂಡಿರುತ್ತಾರೆ ಎಂದರೆ ಗೊತ್ತಿಲ್ಲ.

ಸರ್ವೇ ನಂ. 292 ರಲ್ಲಿ ಒಟ್ಟು 4 ಎಕರೆ ಇರಬಹುದು. ದಾವಾ ಆಸ್ತಿಯ ಷೆಡ್ಯೂಲ್ ಬಿ ನಲ್ಲಿ 4 ಎಕರೆ 38 ಗುಂಟೆ ಜಾಗ ಇರುತ್ತದೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. 1 ರಿಂದ 5 ನೇ ಪ್ರತಿವಾದಿಗಳು ಓ.ಎಸ್. 260/2017 ರಂತೆ ರಾಜಿ ಡಿಕ್ರಿ ಆಧಾರದ ಮೇಲೆ ಎಲ್ಲರೂ ಪಾಲು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಪ್ರಸ್ತುತವಾಗಿ ಪ್ರಕರಣ ನಡೆಯುತ್ತಿದ್ದು, ಕಂದಾಯವನ್ನು ಯಾರು ತುಂಬುತ್ತಿದ್ದಾರೆ ಎಂದು ಗೊತ್ತಿಲ್ಲ ಹಾಗೂ ಯಾರು ಸ್ವಾಧೀನದಲ್ಲಿದ್ದಾರೆ ಎಂದು ಗೊತ್ತಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ 2 ನೇ ಪ್ಯಾರಾದಲ್ಲಿ ದಾವಾಸ್ವತ್ತಿನ ಬಿ ಷೆಡ್ಯೂಲ್‌ನ ಪೂರ್ವಕ್ಕೆ ರಸ್ತೆ ಇದ್ದು, ಸರ್ಕಾರಿ ಗೋಮಾಳ ಸರ್ವೇ ನಂ. 292/ಪಿ7 ಹಾಗೂ ರಸ್ತೆ ಸರ್ವೇ ನಂ. 364, 366 ಹಾಗೂ 367 ಹಾದು ಹೋಗಿ ದೊಡ್ಡಸಾಗ್ಗೆರೆಗೆ ಹೋಗುವ ಟಾರು ರಸ್ತೆಯನ್ನು ಸೇರಿಕೊಳ್ಳುತ್ತದೆ ಎಂಬುದರ ಬಗ್ಗೆ ಸರ್ವೇ ಮಾಡಿಸಿದ್ದೀರಾ ಹಾಗೂ ಅದರ ದಾಖಲೆಯನ್ನು ಹಾಕಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಬಿ ಷೆಡ್ಯೂಲ್‌ನಲ್ಲಿ ಯಾವುದೇ ರೀತಿಯ ರಸ್ತೆಯ ಇರುವುದಿಲ್ಲ ವಾದಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು: ಇರುವುದಿಲ್ಲ.**

**ಮರು ವಿಚಾರಣೆಃ ಇಲ್ಲ**

**(ನನ್ನ ಉಕ್ತ ಲೇಖನದ ಮೇಲೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ ಮತ್ತು ಸರಿ ಇದೆ.**

**ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ದೊಡ್ಡಬಳ್ಳಾಪುರ.**